# ಸ್ವಾಮಿ ವಿವೇಕಾನಂದರ 150ನೇ ಜಯಂತಿ ಮಹೋತ್ಸವ

## ಭಾರತೀಯ ಆಧ್ಯಾತ್ಮಿಕ ಸಮ್ಮಿಲನ – 2012

**( 2012, ಏಪ್ರಿಲ್ 20 ರಿಂದ ಏಪ್ರಿಲ್ 23)**




## ಒಂದು ಮನವಿ

ಪ್ರಿಯ ಸ್ನೇಹಿತರೇ ಮತ್ತು ಭಕ್ತರೇ,

ವರ್ತಮಾನ ಯುಗದ ಪ್ರವಾದಿಯಾದ ಸ್ವಾಮಿ ವಿವೇಕಾನಂದರು ಅಖಂಡ ಮಾನವತೆಯ ಆಧ್ಯಾತ್ಮಿಕ ಚೇತನವನ್ನು ಜಾಗೃತಗೊಳಿಸಲು ಪ್ರಯತ್ನಿಸಿದ ಮಹಾಧೀರ ಸಂನ್ಯಾಸಿಯಾಗಿದ್ದಾರೆ. ಇಡೀ ಜಗತ್ತು, ಅದರಲ್ಲೂ ಭಾರತದೇಶವು ಸ್ವಾಮಿ ವಿವೇಕಾನಂದರ 150ನೇ ಜಯಂತಿ ಮಹೋತ್ಸವವನ್ನು ಆಚರಿಸಲು ಸನ್ನದ್ಧವಾಗಿರುವ ಈ ಶುಭಸಂದರ್ಭದಲ್ಲಿ, ಪಶ್ಚಿಮ ಬಂಗಾಳದ ಹೌರಾ ಜಿಲ್ಲೆಯ ಬೇಲೂರುಮಠದಲ್ಲಿರುವ ವಿಶ್ವವಿಖ್ಯಾತ ರಾಮಕೃಷ್ಣ ಮಠ ಮತ್ತು ರಾಮಕೃಷ್ಣ ಮಿಷನ್ ಮಹಾಸಂಸ್ಥೆಯ ಪ್ರಧಾನಕೇಂದ್ರವು, ತನ್ನ ನೂರಾರು ಶಾಖಾಕೇಂದ್ರಗಳ ಮೂಲಕ, ಈ ಮಹೋತ್ಸವವನ್ನು ಅದ್ದೂರಿಯಾಗಿ ಮತ್ತು ಸಮಂಜಸವಾದ ರೀತಿಯಿಂದ ಆಚರಿಸಲು, ಪ್ರಾದೇಶಿಕ ಹಾಗೂ ರಾಷ್ಟ್ರೀಯ ಹಂತಗಳಲ್ಲಿ ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸಿದೆ.

ಈ ಸುಸಂದರ್ಭವನ್ನು ರಾಮಕೃಷ್ಣ ಮಠ, ಬೇಲೂರುಮಠ – ಇದರ ಅಂಗಸಂಸ್ಥೆಯಾದ ಮೈಸೂರಿನ ಶ್ರೀರಾಮಕೃಷ್ಣ ಆಶ್ರಮವು ತನ್ನದೇ ಆದ ವಿಶಿಷ್ಟರೀತಿಯಲ್ಲಿ, 'ಭಾರತೀಯ ಆಧ್ಯಾತ್ಮಿಕ ಸಮ್ಮಿಲನ' ಎಂಬ ಬೃಹದ್ ಆಧ್ಯಾತ್ಮಿಕ ಸಮಾವೇಶದ ಮೂಲಕ ಆಚರಿಸಲು ನಿಶ್ಚಯಿಸಿದೆ. ಈ ಬೃಹತ್ ಕಾರ್ಯಕ್ರಮವು 2012, ಏಪ್ರಿಲ್ 20 ರಿಂದ ಏಪ್ರಿಲ್ 23 ರವರೆಗೆ ಮೈಸೂರಿನಲ್ಲಿ ಜರುಗಲಿದೆ. ಇದರ ಮುಖ್ಯ ಉದ್ದೇಶ ಸ್ವಾಮಿ ವಿವೇಕಾನಂದರ ಸ್ಫೂರ್ತಿದಾಯಕ ಸಂದೇಶದ ಕಡೆಗೆ ನಮ್ಮ ಯುವಪೀಳಿಗೆ ಆಕರ್ಷಿತರಾಗುವಂತೆ ಮಾಡುವುದು ಮತ್ತು ಜನಸಾಮಾನ್ಯರಲ್ಲಿ ಈ ಪ್ರವಾದಿಸಂತರ ಮಹಾನ್ ಕಾರ್ಯವಾಗಿದ್ದ ಆಧ್ಯಾತ್ಮಿಕ ಸಂಸ್ಕೃತಿಯ ಪುನರುತ್ಥಾನದ ಬಗ್ಗೆ ಅರಿವು ಮೂಡಿಸುವುದು. ರಾಜಾಜಿ (ಚಕ್ರವರ್ತಿ ರಾಜಗೋಪಾಲಾಚಾರಿ) ಅವರು ಸ್ವಾಮಿ ವಿವೇಕಾನಂದರ ಬಗ್ಗೆ ಹೇಳಿರುವ ಈ ಮಾತುಗಳು ಅತ್ಯಂತ ಸೂಕ್ತವಾದುವು: "ಸ್ವಾಮಿ ವಿವೇಕಾನಂದರು ಹಿಂದೂಧರ್ಮವನ್ನು ರಕ್ಷಿಸಿದರು ಮತ್ತು ಭಾರತವನ್ನೂ ಕಾಪಾಡಿದರು. ಅವರಿಲ್ಲದಿದ್ದರೆ, ನಾವು ನಮ್ಮ ಧರ್ಮವನ್ನು ಕಳೆದುಕೊಳ್ಳುತ್ತಿದ್ದೆವು ಹಾಗೂ ನಮ್ಮ ಸ್ವಾತಂತ್ರ್ಯವನ್ನೂ ಗಳಿಸಿಕೊಳ್ಳುತ್ತಿರಲಿಲ್ಲ. ಆದ್ದರಿಂದ ನಮ್ಮದೆಲ್ಲದಕ್ಕೂ ನಾವು ಸ್ವಾಮಿ ವಿವೇಕಾನಂದರಿಗೆ ಚಿರಋಣಿಯಾಗಿರಬೇಕು."

ಈ ಮಹಾಸಮ್ಮಿಲನದ ವಿಶಿಷ್ಟ ಅಂಶವೇನೆಂದರೆ, ವಿವಿಧ ಆಧ್ಯಾತ್ಮಿಕ ಸಂಪ್ರದಾಯಗಳಿಗೆ ಸೇರಿದ ಸುಪ್ರಸಿದ್ಧ ಸಂನ್ಯಾಸಿಗಳು, ಮಠಾಧೀಶರು ಇದರಲ್ಲಿ ಪಾಲುಗೊಳ್ಳುವರು. ನಮ್ಮ ಸಂಸ್ಕೃತಿಯ ಪ್ರಸಾರಕ್ಕೆ ಕಟಿಬದ್ಧರಾಗಿರುವ ಈ ಆಧ್ಯಾತ್ಮಿಕ ಜೀವಿಗಳು ಈ ಬಹುದೊಡ್ಡ ಸಂದರ್ಭದ ಸಾನ್ನಿಧ್ಯವನ್ನು ವಹಿಸಿ, ತಮ್ಮ ಸ್ಫೂರ್ತಿಯುತವಾದ ಮತ್ತು ಉದಾತ್ತ ಚಿಂತನಗಳ ಮೂಲಕ, ಭಾಗವಹಿಸುವ ಪ್ರತಿನಿಧಿಗಳಲ್ಲಿ ನಮ್ಮ ಧರ್ಮ ಮತ್ತು ಸಂಸ್ಕೃತಿಯ ಬಗ್ಗೆ ಅರಿವನ್ನು ಮೂಡಿಸಲಿದ್ದಾರೆ. ಈ ಸಂದರ್ಭದಲ್ಲಿ ಜನಸಾಮಾನ್ಯರಲ್ಲಿ ನಮ್ಮ ಆಧ್ಯಾತ್ಮಿಕ ಪರಂಪರೆಯ ಬಗ್ಗೆ ಪರಿಜ್ಞಾನ ಮೂಡಿಸುವ ಮತ್ತು ಹಿಂದೂಧರ್ಮದ ಆಧಾರಭೂತವಾದ ಐಕ್ಯಶಕ್ತಿಯನ್ನು ಕಂಡುಹಿಡಿದು, ಅದರ ವಿವಿಧ ಕವಲುಗಳನ್ನು ಏಕೀಕರಿಸುವ ಪ್ರಯತ್ನ ನಡೆಯಲಿದೆ.

ಭಾರತೀಯ ಆಧ್ಯಾತ್ಮಿಕ ಸಮ್ಮಿಲನವು ಹಬ್ಬದ ವಾತಾವರಣದಲ್ಲಿ 2012, ಏಪ್ರಿಲ್ 20ರಂದು ಉದ್ಘಾಟನೆಗೊಳ್ಳಲಿದೆ. ಹಲವಾರು ರೀತಿಯ ಕಾರ್ಯಕ್ರಮಗಳು, ಆಧ್ಯಾತ್ಮಿಕ ಸಂಸ್ಕೃತಿಯ ಪ್ರಸ್ತುತತೆಯ ಬಗೆಗಿನ ವಿಚಾರಗೋಷ್ಠಿಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು ಮುಂತಾದವುಗಳ ಮೂಲಕ ಭಾಗವಹಿಸುವ ಪ್ರತಿನಿಧಿಗಳಿಗೆ ಆಧ್ಯಾತ್ಮಿಕ ಪರಿಸರದ ನಿರ್ಮಾಣವನ್ನು ಮಾಡುವ ಉದ್ದೇಶವನ್ನು ಈ ಸಮಾವೇಶ ಹೊಂದಿದೆ. ಈ ಸಮ್ಮೇಳನದಲ್ಲಿ ಒಟ್ಟಾರೆ 1600 ಆವಾಸಿ ಪ್ರತಿನಿಧಿಗಳು, 500 ವಸತಿರಹಿತ ಪ್ರತಿನಿಧಿಗಳು ಮತ್ತು ಮುಖ್ಯವಾಗಿ ಕರ್ನಾಟಕ, ತಮಿಳುನಾಡು, ಕೇರಳ ಮತ್ತು ಆಂಧ್ರಪ್ರದೇಶ ರಾಜ್ಯಗಳಿಂದ ಆಗಮಿಸುವ 200–300 ಸಾಧುಸಂತರು ಭಾಗವಹಿಸಲಿದ್ದಾರೆ.

ಈ ಮಹೋತ್ಸವವನ್ನು ಚಿರಸ್ಮರಣೀಯವಾಗಿ ಆಚರಿಸಲು ಅತಿ ದೊಡ್ಡ ಮೊತ್ತದ ಖರ್ಚು ಒದಗಲಿದೆ. ಸ್ವಾಮಿ ವಿವೇಕಾನಂದರ 150ನೇ ಜಯಂತಿ ಮಹೋತ್ಸವವನ್ನು ಅತಿ ವಿಜೃಂಭಣೆಯಿಂದ ಆಚರಿಸುವ ಈ ಉದಾತ್ತ ಕಾರ್ಯಕ್ಕೆ ಉದಾರವಾಗಿ ಹಣಸಹಾಯ ನೀಡಬೇಕೆಂದು, ನಮ್ಮೆಲ್ಲ ಭಕ್ತರು, ಹಿತೈಷಿಗಳು ಮತ್ತು ಪ್ರಬುದ್ಧ ನಾಗರಿಕರಲ್ಲಿ ಈ ಮೂಲಕ ಪ್ರಾರ್ಥಿಸುತ್ತಿದ್ದೇವೆ. ಹಾಗೆಯೇ ಸಮಾಜದ ಗಣ್ಯವ್ಯಕ್ತಿಗಳು, ಸಂಘಸಂಸ್ಥೆಗಳು, ವಾಣಿಜ್ಯ ಸಂಸ್ಥೆಗಳು, ಬ್ಯಾಂಕ್ ಮುಂತಾದ ಹಣಕಾಸು ಸಂಸ್ಥೆಗಳು ಯಾವುದಾದರೂ ಒಂದು ಅಧಿವೇಶನವನ್ನು ಪ್ರಾಯೋಜಿಸುವ ಮೂಲಕ ಸಹಭಾಗಿಗಳಾಗಬೇಕೆಂದು ವಿನಂತಿಸಿಕೊಳ್ಳುತ್ತಿದ್ದೇವೆ.

ಸ್ವಾಮಿ ವಿವೇಕಾನಂದರ 150ನೇ ಜನ್ಮಜಯಂತಿ ಮಹೋತ್ಸವಕ್ಕೆ ನೀಡುವ ಎಲ್ಲ ದೇಣಿಗೆಗಳಿಗೂ ವರಮಾನ ತೆರಿಗೆ ಕಾನೂನಿನ 80–G ಅಧಿನಿಯಮದ ಪ್ರಕಾರ ತೆರಿಗೆ ವಿನಾಯತಿ ಇದೆ. ಡಿ.ಡಿ. ಮತ್ತು ಚೆಕ್‌ಗಳನ್ನು **"Sri Ramakrishna Ashrama, Mysore"** – ಈ ಹೆಸರಿಗೆ ಬರೆದು, ಲಕೋಟೆಯ ಮೇಲೆ, '**150th Birth Anniversary Celebrations of Swami Vivekananda**' ಎಂದು ನಮೂದಿಸಿ, ಈ ವಿಳಾಸಕ್ಕೆ ಕಳಿಸಬೇಕಾಗಿ ವಿನಂತಿ : '**Sri Ramakrishna Ashrama, Yadavagiri, Mysore – 570 020.**'

ಸ್ವಾಮಿ ವಿವೇಕಾನಂದರ ಆಶೀರ್ವಾದ ನಮ್ಮನಿಮ್ಮೆಲ್ಲರ ಮೇಲೆ ಇರಲಿ ಎಂದು ಅವರನ್ನು ಪ್ರಾರ್ಥಿಸಿಕೊಳ್ಳೋಣ,

ಪ್ರೀತ್ಯಾದರಗಳೊಂದಿಗೆ,

ಭಗವತ್ಸೇವೆಯಲ್ಲಿ ತಮ್ಮವ
ಸ್ವಾಮಿ ಮುಕ್ತಿದಾನಂದ
ಅಧ್ಯಕ್ಷರು

e-mail : rkashram@gmail.com ; Phones: 0821 -2417444 / 2412424



## ಸಂಪಾದಕೀಯ
# ವಿವೇಕಾನಂದ ಚಿಂತನ

## ವಿವೇಕಾನಂದ ವಾಙ್ಮಯದ ವೈಶಿಷ್ಟ್ಯ

### ಉಜ್ವಲ ವಾಣಿ

"ಮಾನವ ಸ್ವಭಾವದ ವೈಭವವನ್ನು ಮರೆಯದಿರಿ! ಇರುವ ಅತ್ಯಂತ ಶ್ರೇಷ್ಠ ದೇವರೆಂದರೆ ನಾವೇ... ಕ್ರಿಸ್ತ ಮತ್ತು ಬುದ್ಧರು 'ನಾನು' ಎಂಬ ಸೀಮಾತೀತ ಸಾಗರದ ಅಲೆಗಳು ಮಾತ್ರವೇ" – ಸ್ವಾಮಿ ವಿವೇಕಾನಂದರು ಸಕಲ ಮಾನವತೆಗೆ ನೀಡುವ ಆದರದ ಕರೆ ಇದು. ಭಗಿನಿ ನಿವೇದಿತಾ ಹೇಳುವಂತೆ, ಸ್ವಾಮಿ ವಿವೇಕಾನಂದರ ಕೃತಿಶ್ರೇಣಿಯಲ್ಲಿ ಇಡೀ ಜಗತ್ತಿಗೆ ಅನ್ವಯಿಸುವ ಸಂದೇಶವಿದೆ; ಅಷ್ಟು ಮಾತ್ರವಲ್ಲದೆ ಹಿಂದೂಗಳು ಅತ್ಯಗತ್ಯವಾಗಿ ತಿಳಿಯಬೇಕಾದ ಅವರ ಧರ್ಮದ ರೂಪುರೇಖೆಗಳೂ ಅಡಕವಾಗಿವೆ. ಆಧುನಿಕ ಯುಗದಲ್ಲಿ ಹಿಂದೂಧರ್ಮವು ನೆಲೆಗೊಳ್ಳುವುದಕ್ಕೆ ಒಂದು ಭದ್ರವಾದ ಅಡಿಪಾಯ ಬೇಕಾಗಿತ್ತು; ತನ್ನ ಶ್ರೇಷ್ಠತೆಯನ್ನು ತಾನು ಗುರುತಿಸಿಕೊಳ್ಳುವುದಕ್ಕೆ ಅದಕ್ಕೆ ಪ್ರಮಾಣೀಭೂತವಾದ ವ್ಯಾಖ್ಯಾನದ ಆವಶ್ಯಕತೆ ಇತ್ತು. **'ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ'** ಅದನ್ನು ಒದಗಿಸಿಕೊಡುತ್ತದೆ.

ಹಾಗೆಂದು ಈ ಕೃತಿಯು ಹಿಂದೂಜನರಿಗೆ ಮಾತ್ರ ಸೀಮಿತವಾದುದಲ್ಲ. ಹಿಂದೂಧರ್ಮವು ವಿಶ್ವಕ್ಕೆ ನೀಡಬಹುದಾದ ಅಪೂರ್ವ ಸತ್ಯಗಳನ್ನು ಇದು ಒಳಗೊಂಡಿದೆ. ಹಿಂದೂಧರ್ಮವು ತನ್ನ ಮತೀಯ ಚೌಕಟ್ಟಿನಿಂದ ಹೊರಬಂದು ವಿಶ್ವಧರ್ಮವಾಗಿ ಇಲ್ಲಿ ಮೆರೆದಿದೆ. ಸಕಲ ಮಾನವತೆಗೂ ಕಲ್ಯಾಣಕಾರಿಯಾದ ಮಹೋತ್ತಮ ಸಂದೇಶ ಸ್ವಾಮಿ ವಿವೇಕಾನಂದರ ಉಜ್ವಲ ವಾಣಿಯ ಮೂಲಕ ಇಲ್ಲಿ ಪ್ರಕಟಿತವಾಗಿದೆ. ಆ ಮೂಲಕ ಹಿಂದೂಧರ್ಮವು ತನ್ನ ನೈಜತೆಯನ್ನು ಮತ್ತು ಸಾರ್ಥಕತೆಯನ್ನು ಇಲ್ಲಿ ಪಡೆದುಕೊಂಡಿದೆ.

ಸ್ವಾಮಿ ವಿವೇಕಾನಂದರು ಮಾಡಿದ ಉಪನ್ಯಾಸಗಳು ಪೂರ್ವ ಮತ್ತು ಪಶ್ಚಿಮ ಜಗತ್ತುಗಳೆರಡರಲ್ಲೂ ಅದ್ಭುತ ಪ್ರಭಾವವನ್ನು ಬೀರಿದವು. ಭಾರತೀಯ ಜನತೆ ತಮ್ಮ ಧರ್ಮ ಮತ್ತು ಸಂಸ್ಕೃತಿಗಳ ಬಗ್ಗೆ ಎಚ್ಚರಗೊಂಡು, ಅಭಿಮಾನವನ್ನೂ ಆತ್ಮವಿಶ್ವಾಸವನ್ನೂ ಹೊಂದಿದರು; ಭಾರತದ ಆಧ್ಯಾತ್ಮಿಕ ಸಂಪತ್ತಿನ ಪರಿಚಯವನ್ನು ಪಾಶ್ಚಾತ್ಯ ಜನತೆ ಸ್ವಾಮಿ ವಿವೇಕಾನಂದರ ಮೂಲಕ ಮಾಡಿಕೊಂಡಿತು. ವಿವೇಕಾನಂದರ ವಿಚಾರಗಳು ಮಾನವಕೇಂದ್ರಿತವಾದುವು; ದೇಶ, ಜಾತಿ, ಮತಗಳ ಸಂಕುಚಿತತೆಗಳನ್ನು ಮೀರಿ, ಪ್ರತಿಯೊಬ್ಬ ಮಾನವನ ಆಧ್ಯಾತ್ಮಿಕ ಅಗತ್ಯವನ್ನು ಪೂರೈಸುವಂಥವು; ಮಾನವನ ನೈಜ ಘನತೆ ಮತ್ತು ಗೌರವಗಳು ಆತನಲ್ಲಿ ಹುದುಗಿರುವ 'ದಿವ್ಯತೆ'ಯಲ್ಲಿ ಮಾತ್ರ ಇವೆ ಎಂಬುದನ್ನು ಘಂಟಾಘೋಷವಾಗಿ ಪ್ರತಿಪಾದಿಸುವಂಥವು.

### ಕೃತಿಶ್ರೇಣಿಯ ಹರವು

ಸ್ವಾಮಿ ವಿವೇಕಾನಂದರ ೧೫೦ನೇ ಜಯಂತಿ ಮಹೋತ್ಸವವನ್ನು ಇಡೀ ವಿಶ್ವವು ಸಡಗರದಿಂದ ಆಚರಿಸಲು ಆರಂಭಿಸಿದೆ. ಈ ಕಾಲಘಟ್ಟದಲ್ಲಿ ಅವರ ಕೃತಿಶ್ರೇಣಿಯಲ್ಲಿ ಅಡಕವಾಗಿರುವ ಅಮೂಲ್ಯ ವಿಚಾರಗಳ ಸ್ಥೂಲ ಪರಿಚಯವನ್ನಾದರೂ ಮಾಡಿಕೊಳ್ಳುವುದು ಅತ್ಯಗತ್ಯ. ಇಂಗ್ಲಿಷ್ ಭಾಷೆಯಲ್ಲಿ ಒಂಬತ್ತು ಸಂಪುಟಗಳಲ್ಲಿ, ೪೭೭೨ ಪುಟಗಳಲ್ಲಿ ಹರಡಿರುವ ಸ್ವಾಮೀಜಿಯವರ ಕೃತಿಗಳ ಸಂಪೂರ್ಣ ಅವತರಣಿಕೆ, ನಾಡಭಾಷೆಯಾದ ಕನ್ನಡದಲ್ಲೂ ಲಭ್ಯವಿರುವುದು ನಮ್ಮ ಭಾಗ್ಯ. 'ಆಡು ಮುಟ್ಟದ ಸೊಪ್ಪಿಲ್ಲ' ಎನ್ನುವಂತೆ ಮಾನವ ಜೀವನದ, ಸಮಾಜದ ಬಹುತೇಕ ಎಲ್ಲ ಪ್ರಕಾರಗಳನ್ನೂ ಸ್ವಾಮೀಜಿ ಇಲ್ಲಿ ವಿಶ್ಲೇಷಿಸಿದ್ದಾರೆ. ವಿವೇಕಾನಂದರ ಕೃತಿಗಳಲ್ಲಿ ಉನ್ನತ ವೇದಾಂತ ತತ್ತ್ವದಿಂದ ಹಿಡಿದು ರಾಷ್ಟ್ರೀಯ ಭಾವನೆಗಳವರೆಗೆ, ರಾಜಯೋಗದಂತಹ ಕಠಿಣ ವಿಚಾರದಿಂದ ಹಿಡಿದು ಮಕ್ಕಳ ಕಥೆಗಳವರೆಗೆ ವಿಚಾರವೈವಿಧ್ಯವಿದೆ.

ಕೃತಿಶ್ರೇಣಿಯಲ್ಲಿ ಹಬ್ಬಿರುವ ವಿವೇಕಾನಂದ ಸಾಹಿತ್ಯವನ್ನು ಹೀಗೆ ವಿಂಗಡಿಸಿಕೊಳ್ಳಬಹುದು: ೧. ಉಪನ್ಯಾಸಗಳು; ೨. ಸಣ್ಣ ಸಣ್ಣ ಗುಂಪುಗಳಿಗೆ ನೀಡಿದ ಭಾಷಣಗಳು ಮತ್ತು ಸಂವಾದಗಳು; ೩. ಪ್ರಶ್ನೋತ್ತರಗಳು; ೪. ತರಗತಿಗಳ ಮತ್ತು ಮಾತುಕತೆಗಳ ಟಿಪ್ಪಣಿಗಳು; ೫. ವಿವಿಧ ಸಂದರ್ಭಗಳಲ್ಲಿ ಬರೆದ ಬರಹಗಳು, ಲೇಖನಗಳು; ೬. ಪೌರಾಣಿಕ ಹಾಗೂ ಐತಿಹಾಸಿಕ ಕಥೆಗಳು ಮತ್ತು ಜೀವನ ವೃತ್ತಾಂತಗಳು; ೭. ಪತ್ರಗಳು; ೮. ಕವನಗಳು; ೯. ಪತ್ರಿಕಾ ವರದಿಗಳು; ೧೦. ಅಭಿಮಾನಿಗಳು ಮತ್ತು ಶಿಷ್ಯರು ಬರೆದ ನೆನಪುಗಳಲ್ಲಿ ಬರುವ ವಿಚಾರಗಳು.

### ವಿವೇಕಾನಂದರ ಪ್ರತಿಭೆ

ಸ್ವಾಮಿ ವಿವೇಕಾನಂದರ ಉಜ್ವಲ ವ್ಯಕ್ತಿತ್ವ, ಬಹುಮುಖ ಪ್ರತಿಭೆ, ಅಸಾಧಾರಣ ಪಾಂಡಿತ್ಯ, ಸುಲಲಿತ ಭಾಷಣ ಮತ್ತು ಬರಹದ

ಶೈಲಿ – ಇವು ಕೃತಿಶ್ರೇಣಿಯನ್ನು ಅಧ್ಯಯನ ಮಾಡಿದಾಗ ನಮ್ಮ ಅರಿವಿಗೆ ಬರುವ ಕೆಲವು ಸಂಗತಿಗಳು. ಸ್ವಾಮೀಜಿ ಗಹನವಾದ ತತ್ತ್ವವನ್ನು ಸರಳವಾದ ಪದಗಳಲ್ಲಿ, ಸುಲಲಿತವಾಗಿ ಮನಮುಟ್ಟುವಂತೆ ಹೇಳುವ ಕಲೆಯನ್ನು ಕರಗತಮಾಡಿಕೊಂಡಿದ್ದರು. ಹಾಗೆಯೇ ಯಾವುದೇ ಕಥೆಯನ್ನು ಆಕರ್ಷಕ ರೀತಿಯಲ್ಲಿ, ಆಸಕ್ತಿ ಮೂಡಿಸುವಂತೆ ವಿವರಿಸುವ ಪ್ರತಿಭೆಯೂ ಅವರಿಗಿತ್ತು. ಅಲ್ಲದೆ, ಶ್ರೇಷ್ಠ ಸಾಹಿತಿಗಳು ಗುರುತಿಸುವಂತೆ, ಅವರ ಬರಹಗಳು ಮತ್ತು ಉಪನ್ಯಾಸಗಳಲ್ಲಿನ ಸಾಹಿತ್ಯಿಕ ಮೌಲ್ಯ ಅನನ್ಯವಾದುದು. ಅವುಗಳಲ್ಲಿ ಸ್ವಭಾವತಃ ಗುಣಾತ್ಮಕತೆಯು ಅಂತರ್ಗತವಾಗಿದೆ; ಚಿಂತನೆಯು ಸಂಕೀರ್ಣವಾಗಿರದೆ ಸ್ಪಷ್ಟ ಮತ್ತು ಸುಲಲಿತವಾಗಿದೆ; ವಿಚಾರಗಳ ಅಭಿವ್ಯಕ್ತಿಯಲ್ಲಿ ಉದಾತ್ತತೆ ಮತ್ತು ಘನತೆ ಕಂಡುಬರುತ್ತದೆ; ಅವು ಉನ್ನತಮಟ್ಟದ ಸ್ಫೂರ್ತಿಯನ್ನು ಓದುಗನಲ್ಲಿ ಉದ್ದೀಪಿಸುತ್ತವೆ; ಹಾಗೆಯೇ ಉದಾತ್ತ ನೈತಿಕ ಮತ್ತು ಆಧ್ಯಾತ್ಮಿಕ ಆಕಾಂಕ್ಷೆಯನ್ನು ಅಧ್ಯಯನಶೀಲನಲ್ಲಿ ಉಂಟುಮಾಡುತ್ತವೆ.

ಒಬ್ಬ ಪ್ರತಿಭಾನ್ವಿತ ವಾಗ್ಮಿ ಹಾಗೂ ಲೇಖಕರಾಗಿ ಸ್ವಾಮೀಜಿ ರೂಪುಗೊಂಡದ್ದು ಮೂರು ಬಗೆಯ ಪ್ರೇರಣೆಗಳಿಂದ. ಅವುಗಳೆಂದರೆ ೧. ಇಂಗ್ಲಿಷ್, ಸಂಸ್ಕೃತ ಮತ್ತು ಬಂಗಾಳಿ ಭಾಷೆಗಳಲ್ಲಿ ಅವರಿಗಿದ್ದ ಅಪ್ರತಿಮ ಭಾಷಾಪ್ರೌಢಿಮೆ, ೨. ಅವರ ಆಧ್ಯಾತ್ಮಿಕ ಅನುಭೂತಿ ಮತ್ತು ಧಾರ್ಮಿಕ ಪರಿಪಕ್ವತೆ ಹಾಗೂ ೩. ಅವರ ಅಂತರಾಳದಲ್ಲಿ ಪ್ರಜ್ವಲಿಸುತ್ತಿದ್ದ ಪ್ರಖರ ರಾಷ್ಟ್ರೀಯಭಾವನೆ. ಮೇಲಿನ ಮೂರು ಪ್ರೇರಣೆಗಳಿಂದ ಸ್ವಾಮೀಜಿ ಒಬ್ಬ ಮಹಾನ್ ಭಾಷಣಕಾರರಾಗಿ ರೂಪುಗೊಂಡ ಬಗೆಯನ್ನು ಭಗಿನಿ ನಿವೇದಿತಾ ಬಣ್ಣಿಸುವುದು ಹೀಗೆ: "ಮಿಕ್ಕವರು (ಗುರಿಯನ್ನು ಸೇರಲು ಬೇಕಾದ) ಮಾರ್ಗಗಳು ಮತ್ತು ಮಾಧ್ಯಮಗಳ ಬಗ್ಗೆ ಮಾತನಾಡಿದರೆ, ಸ್ವಾಮೀಜಿ (ವ್ಯಕ್ತಿಯೊಬ್ಬನ ಹೃದಯಾಂತರಾಳದಲ್ಲಿ ಜ್ಞಾನದ) ಅಗ್ನಿಯನ್ನು ಪ್ರಜ್ವಲಿಸುವುದು ಹೇಗೆ ಎಂದು ಅರಿತಿದ್ದರು. (ಯಾವುದೇ ಸಂಗತಿಯು ಇತರ ವಸ್ತುಗಳಿಗಿಂತ) ಹೇಗೆ ಭಿನ್ನವಾಗಿದೆ ಎಂದು ಇತರರು ವಿವರಿಸಿದರೆ, ಸ್ವಾಮೀಜಿ ಆ ವಸ್ತುವನ್ನು ಸಾಕ್ಷಾತ್ತಾಗಿ ನಮ್ಮ ಮುಂದೆ ನಿಲ್ಲಿಸುವರು."

ಭಾಷಣಕಲೆಯೆನ್ನುವುದು ಸ್ವಾಮಿ ವಿವೇಕಾನಂದರಲ್ಲಿ ಜನ್ಮದಾರಭ್ಯ ಬಂದಿದ್ದ ಅಪೂರ್ವ ಗುಣವಾಗಿತ್ತು. ಹ್ಯಾರಿಯಟ್ ಮನ್ರೋ ಎಂಬುವವರು 'Poetry' ಎನ್ನುವ ಪತ್ರಿಕೆಯ ಸಂಪಾದಕರು. ಅವರು ಸ್ವಾಮೀಜಿಯವರ ಅದ್ಭುತ ವಾಗ್ಮಿತ್ವದ ಬಗ್ಗೆ ಹೇಳುವ ಈ ಕೆಲವು ಮಾತುಗಳು ಸ್ವಾರಸ್ಯಕರವಾಗಿವೆ: "....ಕಾಷಾಯವಸ್ತ್ರಧಾರಿಯಾದ ಸ್ಫುರದ್ರೂಪಿ ಸಂನ್ಯಾಸಿಯು ಅಪ್ಪಟವಾದ ಇಂಗ್ಲಿಷ್ ಭಾಷೆಯಲ್ಲಿ ಮಹೋತ್ತಮ ಸಂದೇಶವನ್ನು ನೀಡಿದರು. ಅವರ ವ್ಯಕ್ತಿತ್ವವು ಸೂರೆಗೊಳ್ಳುವಂತಿತ್ತು; ಅಯಸ್ಕಾಂತದಂತೆ ಸೆಳೆಯುತ್ತಿತ್ತು. ಕಂಚಿನ ಘಂಟೆಯಂತೆ ಶ್ರೀಮಂತವಾಗಿತ್ತು ಅವರ ಕಂಠ. ಅವರು ಪ್ರಕಟಪಡಿಸುತ್ತಿದ್ದ ಭಾವನೆಗಳಲ್ಲಿ ಮನೋನಿಯಂತ್ರಣದ ಸ್ಫುರಣ ಕಾಣುತ್ತಿತ್ತು. ಮೊದಲ ಬಾರಿಗೆ ತಾವು ಎದುರಿಸುತ್ತಿದ್ದ ಪಾಶ್ಚಾತ್ಯ ಜಗತ್ತಿನ ಸಭಿಕರಿಗೆ ಅವರು ನೀಡುತ್ತಿದ್ದ ಸಂದೇಶದಲ್ಲಿ ಅನುಪಮ ಸೌಂದರ್ಯ ಹೊರಸೂಸುತ್ತಿತ್ತು. ಇವೆಲ್ಲವೂ ಸಮರಸಗೊಂಡು, ಅತ್ಯುನ್ನತ ಮಟ್ಟದ ಭಾವನೆಯು ಪ್ರಕಟವಾಗುತ್ತಿದ್ದ ಅಪರೂಪದ ಪರಿಪೂರ್ಣ ಸಂದರ್ಭವನ್ನು ನಮಗೆ ನೀಡಿತ್ತು; ಅತಿಶ್ರೇಷ್ಠ ಶ್ರುತಿಯಲ್ಲಿ ಮೂಡಿಬಂದ ಮಾನವ ವಾಕ್ಸಂಪತ್ತು ಅದಾಗಿತ್ತು."

## ಸ್ವಾತಂತ್ರ್ಯದೆಡೆಗೆ ಸಂಚಲನ

ರೊಮಾ ರೊಲಾ ಫ್ರೆಂಚ್ ಭಾಷೆಯ ಒಬ್ಬ ಶ್ರೇಷ್ಠ ಸಾಹಿತಿ. ಸ್ವಾಮಿ ವಿವೇಕಾನಂದರ ಜೀವನ ಮತ್ತು ಸಂದೇಶಗಳನ್ನು ಉಜ್ವಲವಾದ ಭಾಷೆ ಮತ್ತು ಭಾವನೆಗಳ ಮೂಲಕ ಫ್ರೆಂಚ್ ಭಾಷೆಯಲ್ಲಿ ಮೂಡಿಸಿದ ಮಹಾಮೇಧಾವಿ. 'ಸ್ವಾತಂತ್ರ್ಯಕ್ಕಾಗಿನ ತೀವ್ರ ಹಂಬಲ'ವೇ ಸ್ವಾಮಿ ವಿವೇಕಾನಂದರ ಕೃತಿಗಳಲ್ಲಿ ಹಾಸುಹೊಕ್ಕಾಗಿರುವ ಮುಖ್ಯ ಅಂಶವೆಂದು ಅವರು ಪ್ರತಿಪಾದಿಸುತ್ತಾರೆ. ಜರ್ಮನಿಯ ಪ್ರಸಿದ್ಧ ತತ್ತ್ವಶಾಸ್ತ್ರಜ್ಞ ಹೆಗೆಲ್, 'ಸ್ವಾತಂತ್ರ್ಯವೇ ಮಾನವ ಚೈತನ್ಯದ ಸಾರಸರ್ವಸ್ವ'ವೆಂದು ಹೇಳುತ್ತಾನೆ. ಹಲವು ಸಾವಿರ ವರ್ಷಗಳಿಂದ ಭಾರತೀಯ ಜೀವನದ ಜೀವಾಳ ಕೂಡ 'ಸ್ವಾತಂತ್ರ್ಯದ ಅನ್ವೇಷಣೆ'ಯೇ ಆಗಿತ್ತು. ಈ ಕಾರ್ಯದಲ್ಲಿ ತೊಡಗಿಸಿಕೊಂಡ ಸಾಧಕರ ಮನಸ್ಸಿನ ತುಡಿತ ಎಂದೆಂದೂ ಪರಿಶುಭ್ರವೂ, ಉತ್ಕಟವೂ, ನಿರಂತರವೂ ಆಗಿತ್ತು. ಇದೇ ಅನೇಕ ಋಷಿಮುನಿಗಳಿಗೆ, ಸಂತಶ್ರೇಷ್ಠರಿಗೆ ಪ್ರೇರಣಾದಾಯಕ ಶಕ್ತಿಯಾಗಿ ಪರಿಣಮಿಸಿತು. ಇಷ್ಟಾದರೂ, ರೊಮಾ ರೊಲಾ ಪ್ರಕಾರ, ಆಧ್ಯಾತ್ಮಿಕ ಅನ್ವೇಷಣೆಯ ಈ ಆವೇಗವು ಪರಮಾದ್ಭುತ ರೂಪದಲ್ಲಿ ಪ್ರಕಟಗೊಂಡಿರುವುದು ಕೇವಲ ಕೆಲವರಲ್ಲಿ ಮಾತ್ರ. ಅಂಥ ಅಪೂರ್ವ ಚೇತನಗಳಲ್ಲಿ ಸ್ವಾಮಿ ವಿವೇಕಾನಂದರೂ ಒಬ್ಬರು.

ಸ್ವಾತಂತ್ರ್ಯದ ಅನ್ವೇಷಣೆಯ ವಿಷಯದಲ್ಲಿ ಸ್ವಾಮೀಜಿಯವರದು ನಿಸ್ಸಂದಿಗ್ಧವಾದ ಧೋರಣೆ. "ಈ ವಿಶ್ವವೆಂದರೆ ಏನೆಂದು ತಿಳಿದಿದ್ದೀರಿ? ಅದು ಮೂಡುವುದು ಸ್ವಾತಂತ್ರ್ಯದಲ್ಲಿ, ಅದು ನೆಲೆಗೊಂಡಿರುವುದೂ ಸ್ವಾತಂತ್ರ್ಯದಲ್ಲಿಯೇ" ಎನ್ನುತ್ತಾರೆ ಅವರು. ಅಣುವಿನಿಂದ ಮಾನವನೆಡೆಗೆ, ಅಚೇತನವೂ ನಿರ್ಜೀವವೂ ಆದ ಜಡಪದಾರ್ಥದಿಂದ ಭೂಮಿಯ ಮೇಲೆ ಇರುವ ಅತಿಶ್ರೇಷ್ಠ ಅಸ್ತಿತ್ವ ಹೊಂದಿರುವ ಮಾನವಾತ್ಮದವರೆಗೆ – ನಮ್ಮ ಸುತ್ತಮುತ್ತ ನಾವು ನೋಡುವುದೆಲ್ಲವೂ ಸ್ವಾತಂತ್ರ್ಯದೆಡೆಗೇ ಚಲಿಸುತ್ತಿದೆ. ಹಾಗೆ ನೋಡಿದರೆ, ಇಡೀ ವಿಶ್ವ ಉಂಟಾಗಿರುವುದೇ ಸ್ವಾತಂತ್ರ್ಯಕ್ಕಾಗಿನ ಈ ಸಂಘರ್ಷದ ಫಲವಾಗಿ. ಆ ಸ್ವಾತಂತ್ರ್ಯವನ್ನೇ ನಾವು ದೇವರೆಂದು ಕರೆಯುವುದು. ಸಾಂತ ಹಾಗೂ ಅನಿತ್ಯವಾದ ಜಗತ್ತಿನಲ್ಲಿ ಅದರ ಕಿಡಿ ಮಾತ್ರ ಗೋಚರವಾಗುವುದು. ಕೇವಲ ಅನಂತ ಮತ್ತು ನಿತ್ಯವಾದುದರಲ್ಲಿ ಮಾತ್ರವೇ ಅದು ಪೂರ್ಣವಾಗಿ ಪ್ರಕಟವಾಗುವುದು.

ಇಂದ್ರಿಯಾತೀತವಾದ ಈ ಸ್ವಾತಂತ್ರ್ಯವನ್ನೇ ಎಲ್ಲ ಧರ್ಮಗಳು, ಆಚರಣೆಗಳು ಮತ್ತು ಧರ್ಮಗ್ರಂಥಗಳು ತಮ್ಮ ಏಕಮಾತ್ರ ಗುರಿಯನ್ನಾಗಿಸಿಕೊಂಡಿವೆ. ಸಂಪೂರ್ಣ ಸ್ವಾತಂತ್ರ್ಯದಲ್ಲಿ ಮಾತ್ರವೇ ಪರಿಪೂರ್ಣತೆ ಇರಬಲ್ಲುದು. ಎಲ್ಲ ಬಗೆಯ ಪೂಜೆಯ

ಹಿನ್ನೆಲೆಯಲ್ಲಿ ಇರುವುದು – ನಮಗೆ ಗೊತ್ತಿರಲಿ, ಗೊತ್ತಿಲ್ಲದಿರಲಿ – ಸ್ವಾತಂತ್ರ್ಯದ ಗಳಿಕೆಗಾಗಿನ ಈ ಪ್ರಯತ್ನವೇ. ಹಾಗೆಂದೇ ಸ್ವಾಮೀಜಿ ಮಾನವಕೋಟಿಗೆ ಹೀಗೆ ಕರೆ ನೀಡುತ್ತಾರೆ: "ನೀವು ಎಂದೆಂದಿಗೂ ಸ್ವತಂತ್ರವೂ, ನಿತ್ಯವೂ, ಆನಂದಮಯವೂ ಆದ ಆತ್ಮಸ್ವರೂಪರು. ಈ ಶ್ರದ್ಧೆಯನ್ನು ಬೆಳೆಸಿಕೊಳ್ಳಿ. ಆಗ ಒಂದೇ ನಿಮಿಷದಲ್ಲಿ ನೀವು ಸ್ವತಂತ್ರರಾಗುವಿರಿ."

### ಶಕ್ತಿ ಮತ್ತು ನಿರ್ಭಯತೆಯ ಸ್ಫುರಣ

ಸ್ವಾಮಿ ವಿವೇಕಾನಂದರಿಗೆ ಅತ್ಯಂತ ಪ್ರಿಯವಾದ ಇನ್ನೆರಡು ಭಾವನೆಗಳೆಂದರೆ 'ಶಕ್ತಿ' ಮತ್ತು 'ನಿರ್ಭಯತೆ.' ಸ್ವಾಮೀಜಿಯವರು ಪ್ರತಿಪಾದಿಸುವ ಶಕ್ತಿ, ಆತ್ಮದ ಅರಿವಿನಿಂದ ಹೊರಹೊಮ್ಮುವ ಚೈತನ್ಯಶಕ್ತಿ. ಅದು ಎಲ್ಲರಲ್ಲಿಯೂ ಅಂತರ್ಗತವಾಗಿದೆ. ನಮ್ಮಲ್ಲಿರುವ ಅಪಾರ ಶಕ್ತಿಯ ಬಗೆಗಿನ ನಮ್ಮ ಅಜ್ಞಾನವೇ ಎಲ್ಲ ಬಗೆಯ ದುಃಖಕ್ಕೆ ಕಾರಣ. ಇಂತಹ ದುರ್ಬಲತೆಗೆ ಪರಿಹಾರ, ಅದರ ಬಗ್ಗೆಯೇ ಯೋಚಿಸುತ್ತಿರುವುದಲ್ಲ. ಮನಸ್ಸಿನಲ್ಲಿ ಶಕ್ತಿಯ ಭಾವನೆಯನ್ನು ತುಂಬಿಕೊಂಡಾಗ ಮಾತ್ರ ದುರ್ಬಲತೆಯು ಕಳೆಯುವುದು. ನಮ್ಮ ಕಷ್ಟಗಳಿಗೆ ಯಾರನ್ನೂ ದೂರಿ ಪ್ರಯೋಜನವಿಲ್ಲ. ನಾವು ಈಗ ಇರುವ ಅವಸ್ಥೆಗೆ ನಾವೇ ಕಾರಣರಾಗಿದ್ದೇವೆ. ನಾವು ದುರ್ಬಲರೆಂದು ಭಾವಿಸಿದರೆ, ದುರ್ಬಲರೇ ಆಗುತ್ತೇವೆ. ಬಲಶಾಲಿಗಳೆಂದು ಚಿಂತಿಸಿದರೆ, ಬಲಶಾಲಿಗಳೇ ಆಗುತ್ತೇವೆ. ನಮ್ಮ ಚಿಂತನೆಯ ವಿಧಾನವೇ ನಮ್ಮನ್ನು ಸಶಕ್ತರನ್ನಾಗಿ ಮಾಡಬಲ್ಲದು. ಆದ್ದರಿಂದ ನಾವು ದುರ್ಬಲರು ಎಂದು ಅಳುವ ಕಾಲ ಇದಲ್ಲ. ಸ್ವಾಮೀಜಿ ಹೀಗೆ ಕರೆ ಕೊಡುತ್ತಾರೆ: "ನೀವು ಸಿಂಹಗಳು; ನೀವು ಪರಿಶುದ್ಧವೂ, ಅನಂತವೂ, ಪರಿಪೂರ್ಣವೂ ಆದ ಆತ್ಮಸ್ವರೂಪರು. ಇಡೀ ವಿಶ್ವಶಕ್ತಿಯೇ ನಿಮ್ಮಲ್ಲಿ ಅಡಗಿದೆ. ಆದ್ದರಿಂದ, ಓ ಸ್ನೇಹಿತನೇ, ಏಕೆ ತಾನೇ ಅಳುತ್ತೀಯೆ?"

ನಮ್ಮ ಚಾರಿತ್ರ್ಯವು ಸತ್ಯದ ಮೇಲೆ ನಿಂತಿರಬೇಕು. ಕೇವಲ ಸತ್ಯ ಮಾತ್ರವೇ ನಮ್ಮಲ್ಲಿ ಶಕ್ತಿಸಂಚಾರವನ್ನು ಉಂಟುಮಾಡಬಲ್ಲುದು. ಪಾಪವೆಂದರೆ ನಮ್ಮ ನೈಜಸ್ವಭಾವದ ಕೆಳಮಟ್ಟದ ಅಭಿವ್ಯಕ್ತಿ ಮಾತ್ರ. ನಮ್ಮ ನೈಜಸ್ವಭಾವವನ್ನು ಅತ್ಯಂತ ಶ್ರೇಷ್ಠಮಟ್ಟದಲ್ಲಿ ಪ್ರಕಟಗೊಳಿಸಿಕೊಳ್ಳಬೇಕು. ನಿಜವಾಗಿ ಹೇಳಬೇಕಾದರೆ, ಯಾವುದು ಶಕ್ತಿಭರಿತವೋ, ಅದೇ ಒಳಿತಾದುದು. ಯಾವುದು ದುರ್ಬಲತೆಯಿಂದ ಕೂಡಿರುವುದೋ, ಅದೇ ಕೆಡುಕಾದುದು. ಇವು ಶಕ್ತಿಯ ಬಗ್ಗೆ ಸ್ವಾಮಿ ವಿವೇಕಾನಂದರ ಕೆಲವು ವಿಚಾರಗಳು.

ಸ್ವಾಮಿ ವಿವೇಕಾನಂದರ ಪ್ರಕಾರ ಕೇವಲ ಶಕ್ತಿಯ ಭಾವನೆ ಮಾತ್ರವೇ ನಿರ್ಭಯತೆಯನ್ನು ಉಂಟುಮಾಡಬಲ್ಲುದು. ಉಪನಿಷತ್ತುಗಳು ಶಕ್ತಿ ಮತ್ತು ನಿರ್ಭಯತೆಯ ಸಂದೇಶವನ್ನೇ ಸಾರುತ್ತವೆ. ಉಪನಿಷತ್ತುಗಳಿಂದ ಸಿಡಿಮದ್ದುಗಳಂತೆ ಹೊರಹೊಮ್ಮುತ್ತಿರುವ ಸಂದೇಶವೆಂದರೆ ಈ ನಿರ್ಭಯತೆಯೇ. ಸ್ವಾಮೀಜಿ ಹೇಳುತ್ತಾರೆ, "ಉಪನಿಷತ್ತುಗಳಿಗೆ ಹಿಂತಿರುಗಿ. ಅವುಗಳಲ್ಲಿ ಬೆಳಕು ಬೀರುವ, ಶಕ್ತಿದಾಯಕವಾದ, ಜ್ಯೋತಿರ್ಮಯವಾದ ತತ್ತ್ವಶಾಸ್ತ್ರವಿದೆ. ಎಲ್ಲ ಬಗೆಯ ರಹಸ್ಯ ಸಂಗತಿಗಳಿಂದ, ಎಲ್ಲ ಬಗೆಯ ದೌರ್ಬಲ್ಯಗಳಿಂದ ಬಿಡಿಸಿಕೊಳ್ಳಿ." ಧರ್ಮ ಮತ್ತು ದೇವರು ಎಂದರೆ ಈ ಶಕ್ತಿಯ ಸ್ಫುರಣವೇ ಎಂದು ಸ್ವಾಮೀಜಿ ಅಭಿಪ್ರಾಯಪಡುತ್ತಾರೆ. ಜೀವನದಲ್ಲಿ ಶ್ರೇಷ್ಠವಾದ ಮಾರ್ಗದರ್ಶಕ ಸೂತ್ರವೆಂದರೆ ಶಕ್ತಿಯೇ. ಹೀಗಿರುವಾಗ, ಧರ್ಮಾಚರಣೆಯಲ್ಲಿ ದುರ್ಬಲತೆಯನ್ನು ಉಂಟುಮಾಡುವ ಎಲ್ಲವನ್ನೂ ಪರಿತ್ಯಜಿಸಿ ಎಂದು ಅವರು ಕರೆಕೊಡುತ್ತಾರೆ.

### ಸಾಮರಸ್ಯದ ಸಂವಹನ

ಸ್ವಾಮಿ ವಿವೇಕಾನಂದರ ಕೃತಿಗಳಲ್ಲಿ ಓತಪ್ರೋತವಾಗಿ ಕಂಡುಬರುವ ಇನ್ನೊಂದು ಅಂಶ 'ಸಾಮರಸ್ಯ.' 'ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ' ಗೆ ತಾವು ಬರೆದ ಮುನ್ನುಡಿಯಲ್ಲಿ ಭಗಿನಿ ನಿವೇದಿತಾ ಇದಕ್ಕೇ ಹೆಚ್ಚು ಮಹತ್ವವನ್ನು ನೀಡುತ್ತಾರೆ. ಅವರ ಪ್ರಕಾರ ಚೈತನ್ಯದಾಯಕ ಸತ್ಯಗಳನ್ನು ಇತರ ದೇಶಗಳಿಗೆ ಪ್ರಸಾರ ಮಾಡುವುದರ ಮೂಲಕವೇ ತನ್ನ ಶ್ರೇಷ್ಠತೆಯನ್ನು ಅರ್ಥ ಮಾಡಿಕೊಳ್ಳುವುದನ್ನು, ಭಾರತವು ಬಹು ಹಿಂದೆಯೇ ಕಲಿತುಕೊಂಡಿತ್ತು. ಹಾಗೆಂದೇ ಭಾರತದ ಗುರು ತನ್ನ ಶಿಷ್ಯರಿಗೆ, ಪ್ರಪಂಚದಾದ್ಯಂತ ದಿವ್ಯಸತ್ಯಗಳನ್ನು ಹರಡುವಂತೆ ಕರೆಕೊಡುತ್ತಾನೆ. ಈ ಪ್ರೀತಿಯ ಭಾವೋದ್ವೇಗವೇ ಸ್ವಾಮಿ ವಿವೇಕಾನಂದರ ಮೂಲಕ ಹೊರಹೊಮ್ಮಿತು ಎನ್ನುತ್ತಾರೆ ನಿವೇದಿತಾ.

ಸ್ವಾಮಿ ವಿವೇಕಾನಂದರು ಹಿಂದೂಧರ್ಮವನ್ನು ಬೋಧಿಸುವ ಜೊತೆಜೊತೆಗೇ, ಧರ್ಮಸಾಮರಸ್ಯದ ಮಹಾನ್ ಸಂದೇಶವನ್ನೂ ಪಾಶ್ಚಾತ್ಯ ಜನರಿಗೆ ನೀಡಿದರು. ಒಂದು ಧರ್ಮವು ಸತ್ಯವಾದರೆ, ಎಲ್ಲ ಧರ್ಮಗಳೂ ಸತ್ಯವಾಗಿರಲೇಬೇಕು ಎನ್ನುವುದು ಅವರ ನಿಲುವು. ಹಾಗೆಂದೇ ಅವರು ಹಿಂದೂಧರ್ಮದ ಮುಸುಕು ಹೊತ್ತ ವಿಶ್ವಧರ್ಮವನ್ನು ಜಗತ್ತಿನ ಅಂಗಣದಲ್ಲಿ ಅನಾವರಣಗೊಳಿಸಿದರು. "ಹಿಂದೂಗಳಾದ ನಾವು ಕೇವಲ ಪರಧರ್ಮಸಹಿಷ್ಣುಗಳು ಮಾತ್ರವಲ್ಲ, ಇತರ ಧರ್ಮಗಳೊಡನೆ ಒಂದಾಗುತ್ತೇವೆ" ಎಂದು ಅವರು ಘೋಷಿಸಿದರು. ನಿವೇದಿತಾ ಹೇಳುವಂತೆ, ವಿವೇಕಾನಂದರ ಹೃದಯಕ್ಕೆ ಯಾವುದೂ ಪರಕೀಯವಾಗಿರಲಿಲ್ಲ; ಅವರ ಪಾಲಿಗೆ ಇದ್ದದ್ದು ಒಂದೇ ಮಾನವಜನಾಂಗ, ಒಂದೇ ಸತ್ಯತತ್ತ್ವ.

ಸ್ವಾಮಿ ವಿವೇಕಾನಂದರಲ್ಲಿ ಪ್ರಾಚ್ಯ ಮತ್ತು ಆಧುನಿಕ ಭಾವನೆಗಳು ಒಂದುಗೂಡಿದವು. ಅದಕ್ಕಾಗಿಯೇ ಅವರು ಎಲ್ಲವನ್ನೂ ಒಳಗೊಳ್ಳುವ, ಎಲ್ಲರಿಗೂ ಸ್ವಾತಂತ್ರ್ಯವನ್ನು ನೀಡುವ ಭಾವನೆಗಳನ್ನೇ ನೀಡಿದರು. ಇದಲ್ಲದೆ, ಅವರ ವಾಣಿಯಲ್ಲಿ ಹಿಂದೂಧರ್ಮದ ಅನೇಕ ತಾತ್ತ್ವಿಕ ಹಾಗೂ ಮತೀಯ ಭಾವನೆಗಳು ಸಮರಸತೆಯನ್ನು ಪಡೆದುಕೊಂಡವು; ಲೌಕಿಕ ಮತ್ತು ಪಾರಮಾರ್ಥಿಕತೆಗಳ ನಡುವಣ ಗೋಡೆ ಬಿದ್ದುಹೋಯಿತು; **ಕಲೆ, ವಿಜ್ಞಾನ, ಧರ್ಮ**ಗಳೆಲ್ಲವೂ ಒಂದೇ ಸತ್ಯದ ಅಭಿವ್ಯಕ್ತಿಗಳ ರೂಪದಲ್ಲಿ ಸಾಮರಸ್ಯವನ್ನು ಪಡೆದುಕೊಂಡವು. ಇದಲ್ಲದೆ ಸ್ವಾಮೀಜಿ ಭೂತ–ಭವಿಷ್ಯತ್ತುಗಳ ಸಂಗಮಸ್ಥಾನವೂ ಆದರು. ದುಡಿಮೆಯೇ ಪ್ರಾರ್ಥನೆಯಾಯಿತು;